# ಮುಂಡೂರು ರಿಕ್ಷಾ ಚಾಲಕರ ಬೇಡಿಕೆಗೆ ಸ್ಪಂದಿಸಿದ ಅಶೋಕ್ ರೈ

# ಸ್ಥಳೀಯ ಗ್ರಾ.ಪಂ ಸಹಕಾರ-ಬಿ.ಎಂ.ಎಸ್ ರಿಕ್ಷಾ ತಂಗುದಾಣ ಉದ್ಘಾಟನೆ


ಚಿತ್ರ: ಯೂಸುಫ್ ರೆಂಜಲಾಡಿ

ಪುತ್ತೂರು: ಮುಂಡೂರು ಭಾಗದ ಆಟೋ ರಿಕ್ಷಾ ಚಾಲಕರ ಬಹು ಕಾಲದ ಬೇಡಿಕೆಯಾಗಿದ್ದ ಆಟೋ ತಂಗುದಾಣವು ಉದ್ಯಮಿ, ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಅಶೋಕ್ ಕುಮಾರ್ ರೈ ಕೋಡಿಂಬಾಡಿಯವರ ವಿಶೇಷ ಸಹಕಾರದೊಂದಿಗೆ ನಿರ್ಮಾಣಗೊಂಡು ಅದರ ಉದ್ಘಾಟನೆಯು ನೆರವೇರಿತು. ಮುಂಡೂರಿನಲ್ಲಿ ಸಾಕಷ್ಟು ಆಟೋ ಚಾಲಕರು ಬಾಡಿಗೆ ಮಾಡುತ್ತಿದ್ದರೂ ಅಲ್ಲಿ ರಿಕ್ಷಾ ನಿಲ್ಲಿಸಲು ಸರಿಯಾದ ಸ್ಥಳವಿರಲಿಲ್ಲ, ರಸ್ತೆಯ ಬದಿಯಲ್ಲಿ ಸಾಕಷ್ಟು ಸ್ಥಳಾವಕಾಶವೂ ಇರಲಿಲ್ಲ, ಮಳೆಗಾಲದಲ್ಲಂತೂ ಚಾಲಕರು ಭಾರೀ ಕಷ್ಟಪಡುತ್ತಿದ್ದರು. ಈ ಬಗ್ಗೆ ಉಮೇಶ್ ಗೌಡ ಅಂಬಟ ನೇತೃತ್ವದಲ್ಲಿ ಅಶೋಕ್ ರೈಯವರಿಗೆ ಮನವಿ ಮಾಡಲಾಗಿತ್ತು. ಮನವಿಗೆ ಸ್ಪಂಧಿಸಿ ಸ್ಥಳಕ್ಕೆ ಭೇಟಿ ನೀಡಿದ ಅಶೋಕ್ ರೈಯವರು ನೂತನ ಆಟೋ ರಿಕ್ಷಾ ತಂಗುದಾಣ ನಿರ್ಮಿಸಲು ಸಹಕಾರ ಕೊಡುವ ಬಗ್ಗೆ ಭರವಸೆ ನೀಡಿ ಹೋಗಿದ್ದರು. ಇದೀಗ ನೀಡಿದ್ದ ಭರವಸೆಯನ್ನು ಕೆಲವೇ ದಿನಗಳಲ್ಲಿ ಈಡೇರಿಸಿ ರಿಕ್ಷಾ ಚಾಲಕರ ಹಾಗೂ ಗ್ರಾಮಸ್ಥರ ಅಭಿನಂದನೆಗೆ ಪಾತ್ರರಾಗಿದ್ದಾರೆ. ಬಿ.ಎಂ.ಎಸ್ ಆಟೋರಿಕ್ಷಾ ಚಾಲಕ ಮಾಲಕರ ಸಂಘದವರು ಇದಕ್ಕಾಗಿ ಪ್ರಯತ್ನಪಟ್ಟಿದ್ದು ಉಳಿದ ಕೆಲಸಗಳನ್ನು ಬಿಎಂಎಸ್ ಸಂಘದ ಮುಖಾಂತರ ಮಾಡಲಾಗಿದೆ, ಸುಮಾರು 40 ಸಾವಿರ ರೂ ವೆಚ್ಚದ ಮೇಲ್ಛಾವಣಿಯನ್ನು ಅಶೋಕ್ ರೈ ಕೊಡುಗೆಯಾಗಿ ನೀಡಿದ್ದಾರೆ. ಇದಕ್ಕೆ ಮುಂಡೂರು ಗ್ರಾ.ಪಂ ಸಂಪೂರ್ಣ ಸಹಕಾರ ನೀಡಿದೆ.

**ಉದ್ಘಾಟನಾ ಸಮಾರಂಭ:** ನೂತನ ಆಟೋ ತಂಗುದಾಣವನ್ನು ಉದ್ಘಾಟಿಸಿದ ಅಶೋಕ್ ಕುಮಾರ್ ರೈ ಮಾತನಾಡಿ ಅಭಿವೃದ್ಧಿಯಲ್ಲಿ ಒಗ್ಗಟ್ಟಿರಬೇಕು, ಇಲ್ಲಿ ಆಟೋ ತಂಗುದಾಣ ನಿರ್ಮಾಣ ಮಾಡಲು ಇಲ್ಲಿನ ಗ್ರಾ.ಪಂ ಅಧ್ಯಕ್ಷರು, ಪಿಡಿಒ ಹಾಗೂ ಸದಸ್ಯರು ಸಹಕಾರ ನೀಡಿದ್ದಾರೆ, ಇಂತಹ ಮನಸ್ಸುಗಳಿದ್ದಾಗ ಅಭಿವೃದ್ಧಿ ಸುಲಭವಾಗುತ್ತದೆ ಎಂದರು. ರಾತ್ರಿ ಹಗಲೆನ್ನದೆ, ಜಾತಿ ಧರ್ಮ ನೋಡದೇ ಆಪತ್ಕಾಲದಲ್ಲಿ ಉಪಕಾರಕ್ಕೆ ಸಿಗುವವರೆಂದರೆ ಅದು ಆಟೋ ಚಾಲಕರು ಹಾಗಾಗಿ ಅವರನ್ನು ಸಮಾಜ ರಕ್ಷಕರು ಎಂದರೂ ತಪ್ಪಾಗಲಾರದು, ಅಂತವರ ಬೇಡಿಕೆಗೆ ಸ್ಪಂಧಿಸಿದ್ದಕ್ಕೆ ನನಗೆ ಖುಷಿಯಿದೆ ಎಂದರು. ಅಧ್ಯಕ್ಷತೆ ವಹಿಸಿದ ಮುಂಡೂರು ಗ್ರಾ.ಪಂ ಅಧ್ಯಕ್ಷ ಎಸ್.ಡಿ ವಸಂತ ಮಾತನಾಡಿ ಅಶೋಕ್ ರೈಯವರಷ್ಟು ಸಮಾಜಪರ ಕಾಳಜಿ ವಹಿಸಿ ಕೆಲಸ ಮಾಡುವವರು ಯಾರೂ ಇಲ್ಲ, ಈ ಭಾಗದಲ್ಲಿ ಹಲವು ಸಮಾಜಮುಖಿ ಕೆಲಸಗಳನ್ನು ಅವರು ಮಾಡಿದ್ದಾರೆ, ಕಂಬಳ ಪರ ಹೋರಾಟದಲ್ಲಿ ಸುಪ್ರೀಂ ಕೋರ್ಟ್‌ವರೆಗೂ ಹೋಗಿದ್ದಾರೆ, ಕೆಲಸ ಮಾಡಿದವರನ್ನು ನಾವು ಗುರುತಿಸಬೇಕು ಮತ್ತು ಗೌರವಿಸಬೇಕು, ಅಶೋಕ್ ರೈಯವರ ಇಂತಹ ಕೆಲಸಗಳಿಗೆ ಮುಂಡೂರು ಗ್ರಾ.ಪಂ ಯಾವತ್ತೂ ಸಹಕಾರ ನೀಡುತ್ತದೆ ಮತ್ತು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತದೆ ಎಂದರು.

ಪಿಡಿಒ ಸುಜಾತ ಕೆ, ಬಿಎಂಎಸ್ ಆಟೋ ಚಾಲಕ ಮಾಲಕ ಸಂಘ ಪುತ್ತೂರು ಇದರ ಅಧ್ಯಕ್ಷ ಎ ಭಾಸ್ಕರ ನ್ಯಾಕ್, ಮುಂಡೂರು ಘಟಕದ ಅಧ್ಯಕ್ಷ ಬಾಲಕೃಷ್ಣ ರೈ ಪೊಳಲಿ ಮೊದಲಾದವರು ಮಾತನಾಡಿ ಶುಭ ಹಾರೈಸಿದರು. ಮುಂಡೂರು ಪ್ರಾ.ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ರಮೇಶ್ ಗೌಡ ಪಜಿಮಣ್ಣು, ಮುಂಡೂರು ಗ್ರಾ.ಪಂ ಸದಸ್ಯ ಶೀನಪ್ಪ ನಾಯ್ಕ ಉದಯಗಿರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಭೆಯಲ್ಲಿ ಮುಂಡೂರು ಗ್ರಾ.ಪಂ ಸದಸ್ಯರಾದ ಪ್ರೇಮಲತಾ ಗುತ್ತಿನಪಾಲು, ಬಿ.ಟಿ ಮಹೇಶ್ಚಂದ್ರ ಸಾಲ್ಯಾನ್, ಶಿವನಾಥ ರೈ ಮೇಗಿನಗುತ್ತು, ಮಾಜಿ ಉಪಾಧ್ಯಕ್ಷ ಇಬ್ರಾಹಿಂ ಮುಲಾರ್, ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾದ ತಾಲೂಕು ಅಧ್ಯಕ್ಷ ಅಬ್ದುಲ್ ಕುಂಞಿ ಪಟ್ಟೆ, ಸ್ಥಳೀಯ ಬಿಜೆಪಿ ಮುಖಂಡ ಉಮೇಶ್ ಗೌಡ ಅಂಬಟ, ಮುಂಡೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಸುರೇಶ್ ಕಣ್ಣರಾಯ, ಸದಾಶಿವ ಶೆಟ್ಟಿ ಪಟ್ಟೆ, ವಾಸುದೇವ ಸಾಲ್ಯಾನ್ ಮತ್ತಿತರ ಹಲವರು ಉಪಸ್ಥಿತರಿದ್ದರು. ಸತೀಶ್ ಪ್ರಭು ಮಣಿಯ ಸ್ವಾಗತಿಸಿದರು.

## ನಮಗೆ ಬಹಳ ಉಪಕಾರವಾಗಿದೆ

**ನಮಗೆ ರಿಕ್ಷಾ ಪಾರ್ಕಿಂಗ್ ಮಾಡಲು ಇಲ್ಲಿ ಸರಿಯಾದ ಸ್ಥಳವಿರಲಿಲ್ಲ. ಈಗ ಅಶೋಕ್ ರೈಯವರ ಸಹಕಾರದೊಂದಿಗೆ ನೂತನ ರಿಕ್ಷಾ ತಂಗುದಾಣ ಆಗಿರುವುದರಿಂದ ನಮಗೆ ಬಹಳ ಉಪಕಾರವಾಗಿದೆ. ಹಾಗಾಗಿ ಅಶೋಕ್ ರೈಯವರಿಗೆ, ಬಿಎಂಎಸ್‌ನವರಿಗೆ ಹಾಗೂ ಮುಂಡೂರು ಗ್ರಾ.ಪಂಗೆ ಅಭಿನಂದನೆಗಳು.**

-ರಿಕ್ಷಾ ಚಾಲಕರು ಮುಂಡೂರು